**ಸಾಕ್ಷಿಯನ್ನು ದಿಃ *04/06/2026* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
***ಮುಂದುವರೆದ ಪಾಟೀ ಸವಾಲು : ಶ್ರೀ ಎಂಜಿಪಿ ಪ್ರತಿವಾದಿ ನಂ.4, 5, 7, 8, 9, 13, 18, 21, 26, 30, 31 ಮತ್ತು 38 ಪರ ವಕೀಲರಿಂದ.***

ಯಾವ ತಾಂತ್ರಿಕ ದೋಷದಿಂದ ನನ್ನ ಹೆಸರಿಗೆ ಖಾತೆಯಾಗಿಲ್ಲ ಎಂದು ಹೇಳಲು ಆಗುವುದಿಲ್ಲ. ನಿ.ಪಿ.1 ರ ಪ್ರಕಾರ ಅದರ ಮಾಲೀಕರು ಹೆಸರು ಪೆಂಡಾರಿ ಮತ್ತು ಅವರ ಕುಟುಂಬದವರು ಎಂದು ತಿಳಿದುಕೊಂಡಿದ್ದೇನೆ. ನಿ.ಪಿ.1 ರಲ್ಲಿ ಪೆಂಡಾರಿ ತಾಜಾಬಿ ತಂದೆ ಇಬ್ರಾಂಹಿ ಸಾಹೇಬ ಎಂದು ಇದ್ದು, ಅವರ ಕುಟುಂಬದವರು ಎಂದು ನಮೂದು ಆಗಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಖರೀದಿ ಮಾಡುವ ಕಾಲಕ್ಕೆ ದಾವಾ ಸ್ವತ್ತಿನ ಮಾಲೀಕತ್ವದ ದಾಖಲೆಗಳನ್ನು ಪರಿಶೀಲನೆ ಮಾಡಿದ್ದೇನೆ. ನಿ.ಪಿ.1 ರ ಅಂಕಣ 8 ರಲ್ಲಿ ಇನಾಂ ಎಂದು ನಮೂದಾಗಿರುವುದನ್ನು ನಾನು ನೋಡಿದ್ದೇನೆ. ನಿ.ಪಿ.1 ರ ಅಂಕಣ 11 ರ ಋಣಗಳು ಅಂಕಣದಲ್ಲಿ ಸದರಿ ಸ್ವತ್ತನ್ನು 15 ವರ್ಷ ಪರಭಾರೆ ಮಾಡಬಾರದು ಎಂದು ನಮೂದಿಸಿದ್ದಾರೆ ಎಂದರೆ ಸರಿ. ದಾವಾ ಸ್ವತ್ತು ಪೆಂಡಾರಿ ತಾಜಾಬಿ ತಂದೆ ಇಬ್ರಾಂಹಿಸಾಹೇಬ ಇವರಿಗೆ ಮಂಜೂರಾದ ಜಮೀನು ಎಂದರೆ ಸರಿ. ದಾವಾ ಸ್ವತ್ತನ್ನು ಪೆಂಡಾರಿ ತಾಜಾಬಿ ತಂದೆ ಇಬ್ರಾಂಹಿಸಾಹೇಬ ನಿಮಗೆ ಮಾರಾಟ ಮಾಡಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿದಾರರು ಆ ಸಮಯದಲ್ಲಿ ಅವರು ಮರಣ ಹೊಂದಿದ್ದರು ಎಂದು ಉತ್ತರಿಸುತ್ತಾರೆ. ಸದರಿಯವರ ವಾರಸುದಾರರ ಹೆಸರು ಉತಾರದಲ್ಲಿ ದಾಖಲಾದ ಬಗ್ಗೆ ನಾನು ತಿಳಿದುಕೊಂಡಿಲ್ಲ. ಪೆಂಡಾರಿ ತಾಜಾಬಿ ತಂದೆ ಇಬ್ರಾಂಹಿಸಾಹೇಬ ಇವರ ವಾರಸುದಾರರ ಪ್ರಮಾಣಪತ್ರ ಪಡೆದಿದ್ದಿರಾ ಎಂಬ ಪ್ರಶ್ನೆಗೆ ಸಾಕ್ಷಿದಾರರು ವಾರಸ ಪ್ರಮಾಣಪತ್ರ ಪಡೆಯಲು ಅರ್ಜಿ ಸಲ್ಲಿಸಿರುವುದಾಗಿ ನನಗೆ ಹೇಳಿದ್ದರು ಎಂದು ಉತ್ತರಿಸುತ್ತಾರೆ. ನನಗೆ ಜಮೀನು ಮಾರಾಟ ಮಾಡಿರುವವರೂ ಪೆಂಡಾರಿ ತಾಜಾಬಿ ತಂದೆ ಇಬ್ರಾಂಹಿಸಾಹೇಬ ಇವರ ವಾರಸುದಾರರ ಪ್ರಮಾಣಪತ್ರ ನನಗೆ ಕೊಡಲಿಲ್ಲ. ಸದರಿಯವರ ವಾರಸ ಪ್ರಮಾಣಪತ್ರ ಕೊಡುವಂತೆ ನನಗೆ ಜಮೀನು ಮಾರಾಟ ಮಾಡಿದ ವ್ಯಕ್ತಿಗಳಲ್ಲಿ ಕೇಳಿದ್ದೇನೆ. ಅದಕ್ಕೆ ಅವರು ಪೂರೈಸಲಿಲ್ಲ ಅಥವಾ ಕೊಡಲಿಲ್ಲ. ದಾವಾ ಸ್ವತ್ತನ್ನು ಖರೀದಿ ಮಾಡುವ

ಕಾಲಕ್ಕೆ ಪೆಂಡಾರಿ ತಾಜಾಬಿ ತಂದೆ ಇಬ್ರಾಂಹಿಸಾಹೇಬ ಇವರ ವಾರಸುದಾರರ ಪ್ರಮಾಣಪತ್ರ ನಾನು ನೋಡಿಲ್ಲ. ದಾವಾ ಸ್ವತ್ತನ್ನು ಮಾರಾಟ ಮಾಡಿದ ವ್ಯಕ್ತಿಗಳು ಪೆಂಡಾರಿ ತಾಜಾಬಿ ತಂದೆ ಇಬ್ರಾಂಹಿಸಾಹೇಬ ಇವರ ಮಕ್ಕಳು ಮತ್ತು ಸಹೋದರಿಯರು ಇರುತ್ತಾರೆ. ಪೆಂಡಾರಿ ತಾಜಾಬಿ ತಂದೆ ಇಬ್ರಾಂಹಿಸಾಹೇಬ ಇವರಿಗೆ ಎಷ್ಟು ಜನ ಮಕ್ಕಳು ಮತ್ತು ಸಹೋದರಿಯರು ಎಂದು ನಾನು ತಿಳಿದುಕೊಂಡಿದ್ದೆ, ಆದರೆ ಈಗ ನೆನಪಿಲ್ಲ.

ನಿ.ಪಿ.4 ನ್ನು ಬರೆದುಕೊಟ್ಟಿರುವವರು ಪೆಂಡಾರಿ ತಾಜಾಬಿ ಇವರಿಗೆ ಯಾವ ರೀತಿಯಲ್ಲಿ ಸಂಬಂಧಿಕರು ಎನ್ನುವುದು ನಮೂದಿಸಿಲ್ಲ ಎಂದರೆ ಸರಿ. ಪೆಂಡಾರಿ ತಾಜಾಬಿ ತಂದೆ ಇಬ್ರಾಂಹಿಸಾಹೇಬ ಇವರ ಮರಣದ ನಂತರ ಅವರ ವಾರಸುದಾರರು ತಹಶೀಲದಾರ ಕಚೇರಿಗೆ ಅರ್ಜಿ ಸಲ್ಲಿಸಿ ದಾವಾ ಸ್ವತ್ತಿನಲ್ಲಿ ತಮ್ಮ ಹಕ್ಕು ಸಹ ಇರುವುದಾಗಿ ತಕರಾರು ಮಾಡಿದ್ದರು ಎಂದರೆ ಸರಿಯಲ್ಲ.

1 ನೇ ಪ್ರತಿವಾದಿಯ ವಿರುದ್ದ ನಿ.ಪಿ.3 ರಲ್ಲಿ ಉಲ್ಲೇಖಿಸಿರುವ ಒಂದು ಕ್ರಿಮಿನಲ್ ಮೂಕದ್ದಮೆ ದಾಖಲು ಮಾಡಿದ್ದೆ ಎಂದರೆ ಸರಿ. ದಾವಾ ಸ್ವತ್ತು ಇನಾಂ ಸ್ವತ್ತಾಗಿದ್ದು, 15 ವರ್ಷ ಪರಭಾರೆ ಮಾಡಬಾರದು ಎನ್ನುವ ಷರತ್ತು ಇದ್ದು, ಪೆಂಡಾರಿ ತಾಜಾಬಿ ತಂದೆ ಇಬ್ರಾಂಹಿಸಾಹೇಬ ಇವರ ವಾರಸುದಾರರ ಹೆಸರು ಉತಾರದಲ್ಲಿ ದಾಖಲಾಗದೇ ಇದ್ದರೂ ಸದರಿ ಸ್ವತ್ತನ್ನು ಪರಭಾರೆ ಮಾಡಲು ಬರುವುದಿಲ್ಲ ಎಂದು ಗೊತ್ತದ್ದು ನಾನು ಖರೀದಿ ಮಾಡಿರುವುದರಿಂದ ಸದರಿ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ವರ್ಗಾವಣೆ ಆಗುವುದಿಲ್ಲ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿ ನನಗೆ ಕಳೆದ 18-20 ವರ್ಷಗಳಿಂದ ಪರಿಚಯ. 1 ನೇ ಪ್ರತಿವಾದಿ ರಿಯಲ್ ಎಸ್ಟೇಟ ವ್ಯವಹಾರ ಮಾಡುತ್ತಿದ್ದರು. ದಾವಾ ಸ್ವತ್ತನಲ್ಲಿ ಪ್ಲಾಟುಗಳನ್ನು ಮಾಡಿ 1 ನೇ ಪ್ರತಿವಾದಿ

ಮೂಲಕ ಮಾರಾಟ ಮಾಡಲು ಒಪ್ಪಂದ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ಕೊಟ್ಟ ಜಾಹಿರಾತನ್ನು ಪರಿಗಣಿಸಿ ಪ್ರತಿವಾದಿ 2 ರಿಂದ 38ರವರು ಪ್ಲಾಟ ಖರೀದಿ ಮಾಡಲು ಇಚ್ಛೆ ಹೊಂದಿ ಆ ಪ್ರಕಾರ 1ನೇ ಪ್ರತಿವಾದಿಯನ್ನು ಸಂಪರ್ಕಿಸಿದರು ಎಂದರೆ ಸರಿಯಲ್ಲ. ಪ್ರತಿವಾದಿ 2 ರಿಂದ 38ರವರು ಸ್ಥಳ ಪರಿಶೀಲನೆ ಮಾಡಿ ಯಾವುದೇ ತಕರಾರು ಇಲ್ಲ ಎಂದು ಖಚಿತಪಡಿಸಿಕೊಂಡು ಪ್ಲಾಟುಗಳನ್ನು ಖರೀದಿಸಲು ಮುಂದೆ ಬಂದಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಪ್ಲಾಟುಗಳ ಮೌಲ್ಯ ಹೆಚ್ಚಿಗೆ ಆಗಿರುವುದರಿಂದ ಪ್ರತಿವಾದಿ 2 ರಿಂದ 38ರವರಿಗೆ ಪ್ಲಾಟಗಳನ್ನು ಕೊಡಲು ನಾನು ಮತ್ತು 1ನೇ ಪ್ರತಿವಾದಿ ಮಿಲಾಪಿಯಾಗಿ ಈಗ ಕರಾರು ಮಾಡಿಕೊಂಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

***ಮರು ವಿಚಾರಣೆ: ಇಲ್ಲ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,

ಧಾರವಾಡ.